

ಶಿರಸಿ ತಾಲ್ಲೂಕಿನ ಸ್ವರ್ಣವಲ್ಲಿಯಲ್ಲಿ ಗುರುವಾರ ಆಯೋಜಿಸಿದ್ದ ಕೆರೆ ಸಮ್ಮೇಳನದಲ್ಲಿ ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಸಚಿವ ಅನಂತಕುಮಾರ್ ಮಾತನಾಡುತ್ತಿರುವುದು. ಪರಿಸರ ತಜ್ಞ ಪ್ರೊ. ಬಿ.ಎಂ. ಕುಮಾರಸ್ವಾಮಿ, ವೃಕ್ಷಲಕ್ಷ ಆಂದೋಲನದ ಅಧ್ಯಕ್ಷ ಅನಂತ ಅಶೀಸರ, ಸ್ವರ್ಣವಲ್ಲಿ ಶ್ರೀಗಳು, ಶಾಸಕ ವಿಶ್ವೇಶ್ವರ ಹೆಗಡೆ ಕಾಗೇರಿ, ಭಾರತೀಯ ವಿಜ್ಞಾನ ಸಂಸ್ಥೆಯ ವಿಜ್ಞಾನಿ ಟಿ.ವಿ.ರಾಮಚಂದ್ರ ಪಾಲ್ಗೊಂಡಿದ್ದರು

## ಕೇಂದ್ರ ಸಚಿವ ಅನಂತ್ ಕುಮಾರ್

# ಪರಿಸರ ಉಳಿಸುವ ಹಸಿರು ಜೀವನ ಶೈಲಿ

ಪ್ರಜಾವಾಣಿ ವಾರ್ತೆ ಪ್ರಜಾವಾಣಿ 15/11/14, Page 1

ಶಿರಸಿ: 'ಜಲಮೂಲ, ಪರಿಸರ ಉಳಿಸಲು ಪ್ರತಿಯೊಬ್ಬರೂ ಹಸಿರು ಜೀವನ ಶೈಲಿ ಅಳವಡಿಸಿಕೊಳ್ಳಬೇಕು' ಎಂದು ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಸಚಿವ ಅನಂತಕುಮಾರ್ ಸಲಹೆ ನೀಡಿದರು.

ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯು ವಿವಿಧ ಸಂಘಟನೆಗಳ ಸಹಯೋಗದಲ್ಲಿ ಆಯೋಜಿಸಿರುವ ರಾಜ್ಯ ಮಟ್ಟದ ಮೂರು ದಿನಗಳ ಕೆರೆ ಸಮ್ಮೇಳನವನ್ನು ಗುರುವಾರ ತಾಲ್ಲೂಕಿನ ಸ್ವರ್ಣವಲ್ಲಿ ಮಠದಲ್ಲಿ ಉದ್ಘಾಟಿಸಿ ಅವರು ಮಾತನಾಡಿದರು.

'ಭಾರತೀಯ ಜೀವನ ಪದ್ಧತಿಗೆ ವಿರುದ್ಧವಾದ ಉಪಭೋಗ ಸಂಸ್ಕೃತಿ ನಮ್ಮಲ್ಲಿ ರೂಢಿಗತವಾಗುತ್ತಿದೆ. ನೈಸರ್ಗಿಕ ಸಂಪನ್ಮೂಲವನ್ನು ಉಪಭೋಗಿಸುವ ಸಂಸ್ಕೃತಿಯಿಂದ ಮನುಷ್ಯನಿಗೆ ಮಾತ್ರವಲ್ಲ ಪ್ರಕೃತಿಗೂ ಹಾನಿಯಾಗುತ್ತಿದೆ. ಸೌರಶಕ್ತಿಯ ಸದ್ಬಳಕೆ, ಪ್ಲಾಸ್ಟಿಕ್ ಮಿತ ಬಳಕೆ, ಜಲಮೂಲ ಸಂರಕ್ಷಣೆಯಂತಹ ರಚನಾತ್ಮಕ ಚಟುವಟಿಕೆ ಮೂಲಕ ಹಸಿರು ಜೀವನ ಶೈಲಿ ಅಳವಡಿಸಿಕೊಂಡು ಪರಿಸರ ಸಂರಕ್ಷಿಸಬೇಕು. ಕೆರೆಗಳ ಸಂರಕ್ಷಣೆ ಮೂಲಕ ಅಂತರ್ಜಲ ಮಟ್ಟದಲ್ಲಿ ಸುಸ್ಥಿರತೆ ಕಾಯ್ದುಕೊಳ್ಳಬೇಕು' ಎಂದರು.

'ನದಿ ಜೋಡಣೆ ಯೋಜನೆಯನ್ನು ಕೇಂದ್ರ ಸರ್ಕಾರ ತಡೆಯದಿದ್ದರೆ ಅದೊಂದು ರಾಷ್ಟ್ರೀಯ ದುರಂತವಾಗುತ್ತದೆ. ನದಿ ಜೋಡಣೆ ಬದಲು ನದಿಯ ನೀರನ್ನು ಸಮೀಪದ ಕೆರೆಗಳಿಗೆ ಹಾಯಿಸಿ, ಅಭಿವೃದ್ಧಿಯ ವಿಕೇಂದ್ರೀಕರಣ ಮಾದರಿ ಅನುಷ್ಠಾನಗೊಳಿಸಲು ಸರ್ಕಾರ ಮುಂದಾಗಬೇಕು' ಎಂದು ಪರಿಸರ ತಜ್ಞ ಪ್ರೊ. ಬಿ.ಎಂ. ಕುಮಾರಸ್ವಾಮಿ ಸಲಹೆ ಮಾಡಿದರು.

ಬೆಂಗಳೂರಿನ ವಾಗ್ದೇವಿ ವಿಲಾಸ ಸಂಸ್ಥೆಯ ಅಧ್ಯಕ್ಷ ಹರೀಶ, ವಿಜ್ಞಾನಿ ಆರ್.ಎಸ್. ನಾಯಕ ಪಾಲ್ಗೊಂಡಿದ್ದರು. ಮಹಾರಾಷ್ಟ್ರ, ಅಸ್ಸಾಂ, ಒಡಿಶಾ, ಕೇರಳ ಸೇರಿ 12 ರಾಜ್ಯಗಳ ಪ್ರತಿನಿಧಿಗಳು, ಪರಿಸರ ಸಂಘಟನೆಗಳ ಸದಸ್ಯರು, ವಿದ್ಯಾರ್ಥಿಗಳು, ಸಂಶೋಧಕರು, ತಜ್ಞರು ಸಮ್ಮೇಳನದಲ್ಲಿ ಭಾಗವಹಿಸಿದ್ದಾರೆ.